# ಕನ್ನಡ ಚಿತ್ರರಂಗ ಹೇಗಿತ್ತು ಗೊತ್ತೇ?

'ಮಬ್ಬು ತಬ್ಬಿಬ್ಬು' (ಡಿ. 21) ಲೇಖನ ಓದಿದಾಗ ನೆನಪಾದ ಕೆಲವು ಸಂಗತಿಗಳು



1961ರಲ್ಲಿ ನೆರೆ ಸಂತ್ರಸ್ತರ ನೆರವಿಗೆ ಪರಿಹಾರ ನಿಧಿ ಸಂಗ್ರಹಿಸುತ್ತಿರುವ ಸಿನಿ ತಾರೆಯರು

■ ಪದ್ಮಾ ಶ್ರೀರಾಮ

1950 ಮತ್ತು 60ರ ದಶಕದಲ್ಲಿ ನಮ್ಮ ಕನ್ನಡ ಚಿತ್ರರಂಗದ ನಟ ನಟಿಯರು ಮತ್ತು ಚಿತ್ರರಂಗದ ವಿವಿಧ ಭಾಗಗಳಲ್ಲಿ ದುಡಿಯುತ್ತಿದ್ದವರ ನಡೆ ನುಡಿ, ಅವರ ಸಾಹಸ, ತಮ್ಮ ಭಾಷೆಗಾಗಿ ಅವರು ತೋರಿದ ಬದ್ಧತೆ ಇವುಗಳ ಬಗ್ಗೆ ಅನುಭವಕ್ಕೆ ಬಂದಷ್ಟನ್ನು ಹೇಳಬಯಸುತ್ತೇನೆ. ಅಂದು ಸಿನಿಮಾ–ನಾಟಕಗಳು ಜನತೆಗೆ ಪ್ರಮುಖ ಮನರಂಜನಾ ಸಾಧನಗಳಾಗಿದ್ದವು. ನಮ್ಮಲ್ಲಿ ಚಿತ್ರೀಕರಣಕ್ಕೆ ಬೇಕಾದ ಸೌಲಭ್ಯಗಳು ಅಷ್ಟಾಗಿ ಇಲ್ಲದಿದ್ದ ಕಾಲದಲ್ಲಿ ನಮ್ಮ ಚಿತ್ರರಂಗದ ಎಲ್ಲರಿಗೂ ಸಿನಿಮಾ ನಿರ್ಮಾಣ ತ್ರಾಸದಾಯಕವಾಗಿತ್ತು. ಆದರೆ ಮೈಸೂರಿನ ನಿರ್ಮಾಪಕ ಶಂಕರ್ ಸಿಂಗ್‌ರವರು ಚಿತ್ರೀಕರಣಕ್ಕೆ ಬೇರೆ ಊರಿಗೆ ಹೋಗಲಿಲ್ಲ. ಮೈಸೂರಿನ 'ನವಜ್ಯೋತಿ ಸ್ಟುಡಿಯೊ'ದಲ್ಲಿ ಚಿತ್ರೀಕರಣ, ಮೈಸೂರಿನ ಸುತ್ತಮುತ್ತಲಿನ ಶ್ರೀರಂಗಪಟ್ಟಣ, ಕಾವೇರಿ ನದಿ, ತಲಕಾಡುಗಳಲ್ಲಿ ಹೊರಾಂಗಣ ಚಿತ್ರೀಕರಣ ನಡೆಸಿ 'ಜಗನ್ಮೋಹಿನಿ' ಚಿತ್ರ ತಯಾರಿಸಿದರು. ಈ ಚಿತ್ರ ಹಾಸನದ 'ಪಿಕ್ಚರ್ ಪ್ಯಾಲೆಸ್' ಚಿತ್ರಮಂದಿರದಲ್ಲಿ ಐವತ್ತು ದಿನಗಳು ನಡೆದು ಅಂದಿಗೆ ಒಂದು ದಾಖಲೆ ನಿರ್ಮಿಸಿತು. ಇದೇ ರೀತಿ ಬಿ.ಆರ್. ಪಂತುಲು, ಎಚ್.ಎಲ್.ಎನ್. ಸಿಂಹ ಮುಂತಾದವರು ಚಿತ್ರೀಕರಣಕ್ಕೆ ಅನಿವಾರ್ಯವಾಗಿ ಮದ್ರಾಸನ್ನೇ ಆಶ್ರಯಿಸಿದರೂ, ಉತ್ತಮ ಕನ್ನಡ ಚಿತ್ರಗಳನ್ನು ತಯಾರಿಸಿದರು. ಆ ಕಾಲದ ಅನೇಕ ನಿರ್ಮಾಪಕರು, ದಿಗ್ದರ್ಶಕರು ಕನ್ನಡ ಚಿತ್ರ ತಯಾರಿಕೆಯಲ್ಲಿ ಶ್ರಮಿಸಿದರು.

ಆ ಕಾಲಘಟ್ಟದಲ್ಲಿ ನಟನಟಿಯರಾಗಿ ಮಿಂಚಿದವರು ಇಂದು ನಾವು ನೆನಪಿಸಿಕೊಳ್ಳುವ ರಾಜಕುಮಾರ್, ಕಲ್ಯಾಣ್‌ಕುಮಾರ್, ಉದಯಕುಮಾರ್, ಬಾಲಕೃಷ್ಣ, ನರಸಿಂಹರಾಜು, ಕಮೆಡಿಯನ್ ಗುಗ್ಗು, ಎಂ.ವಿ. ರಾಜಮ್ಮ, ಪಂಢರಿಬಾಯಿ, ಜಯಶ್ರೀ, ಲೀಲಾವತಿ, ಲಕ್ಷ್ಮಿದೇವಿ, ರಮಾದೇವಿ ಆದವಾನಿ ಲಕ್ಷ್ಮೀದೇವಿ, ಕಲ್ಪನಾ, ಶಾಂತಲಾ ಮುಂತಾದ ಇನ್ನೂ ಅನೇಕಾನೇಕ ನಟನಟಿಯರು. ಇವರುಗಳು ತಮ್ಮ ನಟನಾ ಪ್ರತಿಭೆ ಮತ್ತು ನಮ್ಮ ಕನ್ನಡ ಭಾಷೆಯ ಬಗ್ಗೆ ತೋರಿದ ಪ್ರೀತಿ, ಆಸ್ಥೆಯಿಂದ ಅಂದಿನ ಜನಮನದ ಪ್ರೀತಿಯನ್ನು ಗೆದ್ದಿದ್ದರು. ಅಂದಿನ ಸಿನಿಮಾ ಮಂದಿಯ ಭಾಷಾಭಿಮಾನ, ಬದ್ಧತೆಗಳ ಬಗ್ಗೆ ಒಂದೆರಡು ಸಂಗತಿಗಳನ್ನು ಹೇಳಬಯಸುತ್ತೇನೆ.

ಮದ್ರಾಸಿನಲ್ಲಿ ಕನ್ನಡ ಚಿತ್ರ ತಯಾರಿಕೆ ಇದ್ದ ಕಾಲದಲ್ಲಿ ನಟರಾದ ರಾಜಕುಮಾರ್, ನರಸಿಂಹರಾಜು, ಬಾಲಕೃಷ್ಣ, ಜಿ.ವಿ. ಅಯ್ಯರ್ ಸೇರಿ 'ಕನ್ನಡ ಚಲನಚಿತ್ರ ಕಲಾವಿದರ ಸಂಘ'ವನ್ನು ಸ್ಥಾಪಿಸಿಕೊಂಡು ನಾಟಕ ಆಡಲು ಪ್ರಾರಂಭಿಸಿದರು. ಅವರು ನಮ್ಮೂರಿನ ಜಾತ್ರೆಯ ಸಮಯದಲ್ಲಿ 'ಬೇಡರ ಕಣ್ಣಪ್ಪ', 'ಸಾಹುಕಾರ', 'ಎಚ್ಚಮ ನಾಯಕ' ಮುಂತಾದ ನಾಟಕಗಳನ್ನು ಆಡಿದರು. ಜನ ಮುಗಿಬಿದ್ದು ನೋಡಿದರು. ಆಗಲೇ ಸಿನಿಮಾರಂಗದಲ್ಲಿ ಸಾಕಷ್ಟು ಹೆಸರು ಮಾಡಿದ್ದರೂ, ನಾಟಕ ಆಡುವ ಊರಿನಲ್ಲಿ ಎಲ್ಲ ನಟನಟಿಯರು ಸೇರಿ ಒಂದು 'ಕಂಪನಿ ಮನೆ' ಮಾಡಿಕೊಂಡು ಇರುತ್ತಿದ್ದರು. ಕುತೂಹಲದಿಂದ ಬಂದ ವಿದ್ಯಾರ್ಥಿಗಳು, ಇನ್ನಿತರರನ್ನು ಆತ್ಮೀಯತೆಯಿಂದ ಮಾತಾಡಿಸಿ, ಹಸ್ತಾಕ್ಷರ ಕೇಳಿದವರ ಆಟೊಗ್ರಾಫ್‌ಗೆ ಸಹಿ ಹಾಕುತ್ತಿದ್ದರು. ನಾವು ಸಿನಿಮಾದವರು ಎಂಬ ಅಹಂಭಾವದ ಸೋಂಕೇ ಇರಲಿಲ್ಲ.

1961ರ ಸುಮಾರಿನಲ್ಲಿ ಸಿನಿಮಾ ಮಂದಿಯವರು ನಡೆದುಕೊಂಡ ಮತ್ತೊಂದು ಹೃದಯ ತುಂಬಿ ಬರುವ ಘಟನೆಗೆ ಅಂದು ಹದಿಹರೆಯದವರಾಗಿದ್ದ ನಾವೆಲ್ಲ ಸಾಕ್ಷಿಯಾದೆವು. ಆಗ ಕರ್ನಾಟಕದಲ್ಲಿ ಉಂಟಾದ ಪ್ರವಾಹದಿಂದ ಸಾಕಷ್ಟು ಅವಘಡಗಳು ಸಂಭವಿಸಿದವು. ಪ್ರವಾಹ ಸಂತ್ರಸ್ತರ ನೆರವಿಗಾಗಿ ಕನ್ನಡ ಚಲನಚಿತ್ರ ಕಲಾವಿದರು ನಿಧಿ ಸಂಗ್ರಹಿಸಲು ಊರೂರು ತಿರುಗಿದರು. ಲಾರಿಗಳಲ್ಲಿ ನಿಂತು ಪ್ರತಿ ಊರಿನಲ್ಲಿ ಮೆರವಣಿಗೆಯ ಮೂಲಕ ಜನರಿಂದ ಧನ ಸಂಗ್ರಹಿಸಿದರು. 'ಕನ್ನಡ ಚಲನಚಿತ್ರ ಕಲಾವಿದರ ಒಕ್ಕೂಟ' ನಮ್ಮೂರಿಗೆ ಬಂದಾಗ ನಾವು ಊರಿನ ಟಿ.ಬಿ.ಯಲ್ಲಿ ಅವರು ದಣಿವಾರಿಸಿಕೊಳ್ಳಲು ವ್ಯವಸ್ಥೆ, ಉಪಾಹಾರದ ಉಪಚಾರ ಏರ್ಪಡಿಸಿದ್ದೆವು. ಆಗ ನಟಿ ಲೀಲಾವತಿಯವರು ಕೂತ ಕುರ್ಚಿಯಲ್ಲೇ ಕೆನ್ನೆಗೆ ಕೈ ಕೊಟ್ಟು ಕಣ್ಮುಚ್ಚಿ ದಣಿವಾರಿಸಿಕೊಳ್ಳುತ್ತಿದ್ದ ದೃಶ್ಯ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಒಂದು ಮಾನವೀಯ ಕಾರಣಕ್ಕಾಗಿ ಅಂದಿನ ಚಿತ್ರರಂಗದವರ ಮನ ಮಿಡಿದಿತ್ತು.

ಇದೇ ಕಾರಣಕ್ಕಾಗಿ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಸಂಸ್ಥೆಯ ಕಡೆಯಿಂದ ಬೆಂಗಳೂರಿನಲ್ಲಿ ಚಲನಚಿತ್ರ ನಟನಟಿಯರಿಂದ ನಿಧಿ ಸಂಗ್ರಹಣೆಗಾಗಿ ಒಂದು ಮನರಂಜನಾ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಗುಬ್ಬಿ ವೀರಣ್ಣನವರು ಮತ್ತವರ ಪತ್ನಿ ಜಯಮ್ಮನವರು 'ಸದಾರಮೆ' ನಾಟಕದ ದೃಶ್ಯವೊಂದರ ತುಣುಕನ್ನು ಅಭಿನಯಿಸಿದರು. ನಟನಟಿಯರು ಅಭಿನಯಿಸಿದ ಕಾರ್ಯಕ್ರಮದಿಂದ ಪ್ರವಾಹ ಪರಿಹಾರ ನಿಧಿಗೆ ಸಾಕಷ್ಟು ಹಣ ಸಂಗ್ರಹವಾಯ್ತು. ಮತ್ತು ಆ ಕಾರ್ಯಕ್ರಮಕ್ಕೆ ಕೊಟ್ಟ 'ರಸಮಂಜರಿ' ಎಂಬ ಅಭಿದಾನ ಮುಂದೆ ಸಾಕಷ್ಟು ಚಾಲ್ತಿಗೆ ಬಂದಿತು.

ನೇಪಥ್ಯಕ್ಕೆ ಸರಿದ, ಮನಮಿಡಿಯುವ ಸಂಗತಿಯೊಂದನ್ನು ಕೊನೆಯದಾಗಿ ಹೇಳಬೇಕಾಗಿದೆ. ಜನಪ್ರಿಯ ಹಾಸ್ಯನಟ ಬಾಲಕೃಷ್ಣ ಅವರಿಗೆ 'ಬೆಂಗಳೂರಿನಲ್ಲಿ ನಮ್ಮದೇ ಒಂದು ಸ್ಟುಡಿಯೊ ಆಗಿ, ಅಲ್ಲಿ ಕನ್ನಡ ಚಲನಚಿತ್ರಗಳ ಚಿತ್ರೀಕರಣ ನಡೆಯಬೇಕು' ಎಂಬ ಮಹದಾಸೆ ಹುಟ್ಟಿ, ಅದಕ್ಕಾಗಿ ಹಣ ಸಂಗ್ರಹಣೆಗಾಗಿ ಬಹಳ ಪಾಡುಪಟ್ಟರು. ಈ ಸಂದರ್ಭದಲ್ಲಿ ನಮ್ಮೂರಿಗೂ ಬಂದು ನಮ್ಮ ತಂದೆಯವರೊಡನೆ ಊರಿನ ಅನೇಕ ಪ್ರತಿಷ್ಠಿತರನ್ನು ಕಂಡರು. ಅವರು ಪ್ರಾರಂಭಿಸಿದ 'ಅಭಿಮಾನ್ ಸ್ಟುಡಿಯೊ' ಅರೆಬರೆ ಆಯಿತು. ನೇಪಥ್ಯಕ್ಕೆ ಸರಿಯಿತು.

ಕನ್ನಡ ಚಿತ್ರರಂಗದ ನಟನಟಿಯರು ಒಂದು ಕಾಲದಲ್ಲಿ ಜನರ ಮುಂದೆ ಬಂದು ಪ್ರವಾಹ ಪರಿಹಾರ ನಿಧಿಗಾಗಿ ಕೇಳಿಕೊಂಡಿದ್ದಾಗಲಿ, ಕರ್ನಾಟಕದಲ್ಲೇ ಚಿತ್ರ ತಯಾರಿಸುತ್ತೇನೆ ಎಂಬ ದೃಢ ನಿಲುವು ತಾಳಿದ್ದಾಗಲಿ, ಮಾತೃಭಾಷೆಗಾಗಿ ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ್ದಾಗಲಿ ನಟನೆಯೇ? ಅಥವಾ ತಮ್ಮ ನೆಲ, ಜಲ, ಭಾಷೆಗಳ ಮೇಲಿನ ಪ್ರೀತಿ, ಗೌರವಗಳಿಂದಲೇ?

ಪ್ರತಿಕ್ರಿಯಿಸಿ: feedback@sudha.co.in